**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 43/2025**

**ಸಿ.ಡಬ್ಲ್ಯೂಃ 7**
**ಪಿ.ಡಬ್ಲೂಃ** 7

**ಸಾಕ್ಷಿದಾರರ ಹೆಸರು ಃ ಸಾಧನ್ ಪಟೇಲ್**
**ತಂದೆಯ ಹೆಸರು ಃ ಹಿರಿಯಣ್ಣ**
**ವಯಸ್ಸು ಃ 26 ವರ್ಷ**
**ಉದ್ಯೋಗ ಃ ಕೃಷಿ**
**ವಾಸಸ್ಥಳ ಃ ಮಸಿಗೆ ಗ್ರಾಮ, ಶೃಂಗೇರಿ ತಾಲ್ಲೂಕು.**

**ದಿನಾಂಕಃ 17.03.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ಹಾಸನದಿಂದ ಸಮಾವೇಶ ಮುಗಿಸಿಕೊಂಡು ದಿನಾಂಕಃ 05.12.2024 ರಂದು ಶೃಂಗೇರಿಗೆ ಚಾಸಾ-6 ರವರ ಕಾರಿನಲ್ಲಿ ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ನಾನು ಮತ್ತು ಚಾಸಾ-6 ರವರು ಬಾಳೆಹೊನ್ನೂರಿನಲ್ಲಿ ಊಟ ಮಾಡಲು ಕಾರನ್ನು ನಿಲ್ಲಿಸಿದೆವು. ಆಗ ರಾತ್ರಿ ಸುಮಾರು 9.30 ಗಂಟೆ ಆಗಿತ್ತು. ಆ ಸಂದರ್ಭದಲ್ಲಿ ನಾನು ಮತ್ತು ಚಾಸಾ-6 ರವರು ಕಾರಿನಿಂದ ಇಳಿದು ಸೌಂದರ್ಯ ಹೋಟೆಲ್ ಬಳಿ ಹೋಗುವಾಗ್ಗೆ ಆರೋಪಿತರ ಕೈಯಲ್ಲಿ ಒಂದು ಹೊಡೆದ ಬಿಯರ್ ಬಾಟಲ್ ಇತ್ತು. ನಾವು ಗಲಾಟೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಆ ಸಂದರ್ಭದಲ್ಲಿ ಚಾಸಾ-1, 4 ಮತ್ತು 5 ರವರುಗಳು ಗಾಯಗೊಂಡಿದ್ದರು. ಸದರಿ ಚಾಸಾ-1, 4 ಮತ್ತು 5 ರವರನ್ನು ಚಿಕಿತ್ಸೆಗಾಗಿ ಬಾಳೆಹೊನ್ನೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

ತದನಂತರ ನಾವು ಶೃಂಗೇರಿಗೆ ಹೋದೆವು. ಮರುದಿನ ನಾವು ನಮ್ಮ ಹೇಳಿಕೆಯನ್ನು ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ನೀಡಿರುತ್ತೇವೆ. ಸದರಿ ದಿನದಂದು ಆರೋಪಿತರು ತಮ್ಮ ಕೈಯಲ್ಲಿ ಹಿಡಿದುಕೊಂಡಿದ್ದ ಹೊಡೆದ ಬಿಯರ್ ಬಾಟಲನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ಎಂಒ-1 ಎಂದು ನಿಶಾನೆಗೊಂಡಿರುತ್ತದೆ. (ಈ ದಿನ ನ್ಯಾಯಾಲಯದಲ್ಲಿ

ಆರೋಪಿತರು ಗೈರು ಹಾಜರಿದ್ದು ಅವರ ಗುರುತಿಸುವಿಕೆಯನ್ನು ಆರೋಪಿತರ ಪರ ವಕೀಲರು ಆಕ್ಷೇಪಿಸುವುದಿಲ್ಲ ಎಂದು ನುಡಿಯುತ್ತಾರೆ. )

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ನಾನು ಸದರಿ ಗಲಾಟೆಯನ್ನು ಬಿಡಿಸಲು ಹೋದಂತಹ ಸಂದರ್ಭದಲ್ಲಿ ಆರೋಪಿತರು ಕಾಲಿನಿಂದ ಚಾಸಾ-5 ರವರಿಗೆ ಒದ್ದಿರುತ್ತಾರೆಂದರೆ ಸರಿ. ಆರೋಪಿತರು ಚಾಸಾ-1 ಮತ್ತು 4 ರವರಿಗೆ ಕೊಲೆ ಬೆದರಿಕೆ ಹಾಕುತ್ತಿದ್ದರು ಎಂದರೆ ಸರಿ. ಆರೋಪಿತರು ಶೃಂಗೇರಿಯಲ್ಲಿ ಆರ್ ಟಿ ಐ ಕಾರ್ಯಕರ್ತನಾಗಿ ಹಲವು ರೈತರಿಗೆ, ಅಧಿಕಾರಿಗಳಿಗೆ ತೊಂದರೆ ಕೊಡುತ್ತಿದ್ದರಿಂದ ಈ ರೀತಿ ಮಾಡಬೇಡ ಎಂದು ಬುದ್ಧಿವಾದ ಹೇಳಿದ ಪರಿಣಾಮ ಗಲಾಟೆ ಸಂಭವಿಸಿರುತ್ತದೆ ಎಂದರೆ ಸರಿ. ದಿನಾಂಕಃ 07.12.2024 ರಂದು ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ನಾನು ನನ್ನ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದಃಃ**

ನನಗೆ ಆರೋಪಿತರ ಪರಿಚಯ ಇರುವುದಿಲ್ಲ. ಆರೋಪಿತರು ಯಾರ ವಿಚಾರವಾಗಿ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ದಾಖಲೆಗಳನ್ನು ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಬಳಿ ಯಾವುದೇ ರೈತರು ಅಥವಾ ಅಧಿಕಾರಿಗಳು ಆರೋಪಿತರು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ದಾಖಲೆಗಳನ್ನು ಪಡೆದುಕೊಂಡ ಕಾರಣ ತಮಗೆ ಕಿರುಕುಳ ಆಗುತ್ತಿದೆ ಎಂದು ಹೇಳಿರುವುದಿಲ್ಲ. ಸದರಿ ವಿಚಾರಗಳ ಬಗ್ಗೆ ಆರೋಪಿತರು ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಯಲ್ಲಿ ಹಾಕಿಕೊಂಡಿದ್ದರಿಂದ ನನಗೆ ತಿಳಿಯಿತು. ಆರೋಪಿತರು ಸಾಮಾಜಿಕ ಜಾಲತಾಣಗಳಲ್ಲಿ ಒಂದು ವಾರ್ತಾ ಚಾನಲ್ ಅನ್ನು ನಡೆಸುತ್ತಿದ್ದಾರೆ. ಆರೋಪಿತರು ಯಾವ ಅಧಿಕಾರಿಗಳು ಮತ್ತು ರೈತರ ಬಗ್ಗೆ ಯಾವ ದಾಖಲೆಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಘಟನಾ ದಿನದಂದು ನಾನು ಮತ್ತು ಚಾಸಾ-6 ರವರು ಹಾಸನದಲ್ಲಿ ಸಮಾವೇಷ ಮುಗಿಸಿಕೊಂಡು ಸಂಜೆ 4 ಗಂಟೆಗೆ ಚಾಸಾ-6 ರವರ ಕಾರಿನಲ್ಲಿಯೇ ಹೊರಟೆವು. ಬಾಳೆಹೊನ್ನೂರಿನಲ್ಲಿ ಊಟ ಮಾಡಲು ನಿಲುಗಡೆ ಮಾಡುವಂತೆ ನಮಗೆ ಯಾರು ಫೋನ್

ಕರೆ ಮಾಡಿ ತಿಳಿಸಲಿಲ್ಲ. ಚಾಸಾ-1, 4 ಮತ್ತು 5 ರವರನ್ನು ಆಸ್ಪತ್ರೆಗೆ ಚಾಸಾ-6 ರವರ ಕಾರಿನಲ್ಲಿಯೇ ಕರೆದುಕೊಂಡು ಹೋದೆವು. ಆರೋಪಿತರನ್ನು ಆಸ್ಪತ್ರೆಗೆ ನಾವು ದಾಖಲು ಮಾಡಲಿಲ್ಲ. ಘಟನೆಯಾದ 10 ನಿಮಿಷದ ಬಳಿಕ ನಾವು ಚಾಸಾ-1, 4 ಮತ್ತು 5 ರವರುಗಳನ್ನು ಬಾಳೆಹೊನ್ನೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇವೆ. ನಾನು ಸದರಿ ಚಾಸಾ-1, 4 ಮತ್ತು 5 ರವರ ರೋಗಿಗಳ ಅರ್ಜಿಯನ್ನು ಭರ್ತಿ ಮಾಡಿ ನೀಡಲಿಲ್ಲ. ಚಾಸಾ-1, 4 ಮತ್ತು 5 ರವರನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಿಕೊಂಡು ನಾವೆಲ್ಲರೂ ಒಟ್ಟಿಗೆ ಶೃಂಗೇರಿಗೆ ಹೋದೆವು. ನಾವು ಆಸ್ಪತ್ರೆಯಲ್ಲಿ ಇರುವಾಗ್ಗೆ ಆಸ್ಪತ್ರೆಗೆ ಯಾರು ಸಹ ಬಂದಿರಲಿಲ್ಲ. ಸದರಿ ಸಮಯದಲ್ಲಿ ನಾನಾಗಲೀ, ಚಾಸಾ-1,4, ಮತ್ತು 6 ರವರಾಗಲೀ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಬಾಳೆಹೊನ್ನೂರಿನ ಪೊಲೀಸ್ ಠಾಣೆಯವರು ನನ್ನ ಪೋನ್ ನಂಬರ್ ತೆಗೆದುಕೊಂಡಿರುವುದಿಲ್ಲ. ನಾನು ಎಲ್ಲರನ್ನು ಮರುದಿನ ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದೆ. ನಾನು ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಯಾವ ಯಾವ ದಾಖಲೆಗಳಿಗೆ ಸಹಿ ಮಾಡಿದಿರಿ ಎಂದರೆ ಸಾಕ್ಷಿಯು ಹಿಂದಿನ ದಿನ ಚಾಸಾ-1, 4 ಮತ್ತು 5 ರವರನ್ನು ಆಸ್ಪತ್ರೆಗೆ ದಾಖಲು ಮಾಡಿದ ಬಗ್ಗೆ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ತಿಳಿಯದೇ ಇದ್ದರೂ ಸಹ ನಾನು ನಮ್ಮ ಊರಿನವರ ಮಾತನ್ನು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎಂಒ-1 ಕ್ಕೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಃ ಮರು ವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**